ಕರ್ನಾಟಕ ವಿಧಾನ ಸಭೆ

(ಒಂಭತ್ತನೆಯ ವಿಧಾನಸಭೆ)

ಎಂಟನೆಯ ಅಧಿವೇಶನ

ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಧೇಯಕ, 1993.

(1993ರ ವಿಧಾನಸಭಾ ವಿಧೇಯಕ ಸಂಖ್ಯೆ I)

1961 ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ ಅವಧಿಯನ್ನು ವಿಸ್ತರಿಸುವ ಒಂದು ವಿಧೇಯಕ.

ಈ ಮುಂದೆ ಹೇಳಿರುವ ಉದ್ದೇಶಗಳಿಗಾಗಿ 1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಮದ (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಅವಧಿಯನ್ನು ಪೂರ್ವಾನ್ವಯದಿಂದ ಜಾರಿಗೆ ಬರುವಂತೆ ವಿಸ್ತರಿಸಲು ಉಪಬಂಧ ಕಲ್ಪಿಸುವುದು ಅಗತ್ಯವಾಗಿರುವುದರಿಂದ;

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ಅಧಿನಿಯಮ, 1993 ಎಂದು ಕರೆಯತಕ್ಕದ್ದು.

(2) ಇದು 1992ರ ಡಿಸೆಂಬರ್ 31ನೇ ದಿನಾಂಕದಿಂದ ಜಾರಿಗೆ ಬರುವುದಾಗಿ ಭಾವಿಸತಕ್ಕುದು.

2. 1961ರ ಕರ್ನಾಟಕ ಅಧಿನಿಯಮ 22ರ 1ನೇ ಪ್ರಕರಣದ ತಿದ್ದುಪಡಿ.- (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಮಯವೆ ಎಂದು ಉಲ್ಲೇಖಿತವಾಗಿರುವ) ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, 1961ರ 1ನೇ ಪ್ರಕರಣದ 4ನೇ ಉಪಪ್ರಕರಣದಲ್ಲಿ "1992" ಎಂಬ ಅಂಕಿಗಳಿಗೆ ಬದಲಾಗಿ "1997" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

3. ಉಳಿಸುವಿಕೆಗಳು.- ಈ ಅಧಿನಿಯಮದಲ್ಲಿರುವುದು ಯಾವುದೂ, 1993ರ ಜನವರಿ 1ನೇ ದಿನಾಂಕದಂದು ಪ್ರಾರಂಭವಾಗುವ ಮತ್ತು ಈ ಅಧಿನಿಯಮವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾಗುವ ದಿನಾಂಕವು ಕೊನೆಗೊಳ್ಳುವ ಅವಧಿಯಲ್ಲಿ ಯಾವನೇ ವ್ಯಕ್ತಿಯನ್ನು ಅವನು ಮಾಡಬಹುದಾದ ಯಾವುದೇ ಕೃತ್ಯ ಅಥವಾ ಲೋಪದ ಸಂಬಂಧದಲ್ಲಿನ, ಈ ಅಧಿನಿಯಮದ ಮೂಲಕ ಮೂಲ ಅಧಿನಿಯಮದ ಅವಧಿ ವಿಸ್ತರಣೆಯಿಂದಾಗಿ ಅಂಥ ಕೃತ್ಯ ಅಥವಾ ಲೋಪವು ಅಪರಾಧವಾಗಿರದಿದ್ದಲ್ಲಿ ಯಾವುದೇ ಅಪರಾಧದ ದೋಷಿ ಎಂದು ಪರಿಗಣಿಸತಕ್ಕದ್ದಲ್ಲ.

4.ಸಂದೇಹ ನಿವಾರಣೆ.- ಸಂದೇಹ ನಿವಾರಣೆಗಾಗಿ, ಮೂಲ ಅಧಿನಿಯಮವನ್ನು, ಇದು 1992ರ ಡಿಸೆಂಬರ್ 31ರಂದು ಕೊನೆಗೊಂಡಿದ್ದು, ಇದನ್ನು ಈ ಅಧಿನಿಯಮದಿಂದ, 1997ರ ಡಿಸೆಂಬರ್ 31ರ ದಿನಾಂಕದವರೆಗೆ ಮತ್ತು ಅದನ್ನೂ ಒಳಗೊಂಡಂತೆ, ಪೂರ್ವನ್ವಯವಾಗಿ ಅವಧಿ ವಿಸ್ತರಿಸಲಾಗಿದ್ದು, ಇದು ಯಾವುದೇ ಕಾಲದಲ್ಲಿ ಎಂದೂ ಕೊನೆಗೊಂಡಿರಲಿಲ್ಲವೆಂದು ಭಾವಿಸತಕ್ಕದಂದು ಮತ್ತು ಈ

ಅಧಿನಿಯಮದಿಂದ ತಿದ್ದುಪಡಿಯಾದ ಮತ್ತು ವಿಸ್ತರಿಸಲಾದ ಇದರ ಎಲ್ಲಾ ಉಪಬಂಧಗಳು, ಈ ಅಧಿನಿಯಮದ 3ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ನಿರಂತರವಾಗಿ ಜಾರಿಯಲ್ಲಿರುವುದಾಗಿ ಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ ಅವಧಿಯು, 1992ರ ಡಿಸೆಂಬರ್ 31ನೇ ದಿನಾಂಕದಂದು ಮುಕ್ತಾಯಗೊಂಡಿತು. ಸದರಿ ಅಧಿನಿಯಮದ ಅವಧಿಯನ್ನು ಮತ್ತೆ ಐದು ವರ್ಷಗಳವರೆಗೆ ಅಂದರೆ, 1997ರ ಡಿಸೆಂಬರ್ ಮುವತ್ತೊಂದನೇ ದಿನಾಂಕದವರೆಗೆ ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆರ್ಥಿಕ ಜ್ಞಾಪನ ಪತ್ರ

1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ತಗಲುವ ಸಿಬ್ಬಂದಿ ವೆಚ್ಚವು ವರ್ಷಕ್ಕೆ ಸುಮಾರು 10,00,000-00 ರೂಪಾಯಿಗಳಾಗಿರುತ್ತದೆ (ಹತ್ತು ಲಕ್ಷ ರೂಪಾಯಿಗಳು). ಯಾವುದೇ ಆವರ್ತಕ ಖರ್ಚುಗಳು ಇರುವುದಿಲ್ಲ.

ಎಂ ರಾಜಶೇಖರ ಮೂರ್ತಿ,
ಕಂದಾಯ ಸಚಿವರು.

ಎಂ. ಇನ್ನಾಸಪ್ಪ
ಕಾರ್ಯದರ್ಶಿ.

ಅನುಬಂಧ

[1961 ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ (1961ರ ಕರ್ನಾಟಕ ಅಧಿನಿಯಮ 22) ಉದ್ಧೃತ ಭಾಗ]

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅವಧಿ.- ಈ ಅಧಿನಿಯಮವನ್ನು ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, 1961 ಎಂದು ಕರೆಯತಕ್ಕದು.

2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತದೆ.

4) ಇದು, 1992ರ ಡಿಸೆಂಬರ್ ಮುವತ್ತೊಂದನೇ ದಿನಾಂಕದವರೆಗೆ ಮತ್ತು ಅದನ್ನು ಒಳಗೊಂಡಂತೆ ಜಾರಿಯಲ್ಲಿರತಕ್ಕದ್ದು ಮತ್ತು ಈ ಅಧಿನಿಯಮವು ಮುಕ್ತಾಯಗೊಂಡ ತರುವಾಯ, 1899ರ ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮದ ೆನೇ ಪ್ರಕರಣವು, ಈ ಅಧಿನಿಯಮವು ಖಾಯಂ ಕರ್ನಾಟಕ ಅಧಿನಿಯಮವಾಗಿದ್ದರೆ ಹೇಗೋ ಹಾಗೆ ಮತ್ತು ಇದು ಮುಕ್ತಾಯಗೊಳ್ಳುವುದಕೆ ನಿಕಟ ಪೂರ್ವದಲ್ಲಿ ಕರ್ನಾಟಕ ಅಧಿನಿಯಮದಿಂದ ನಿರಸಿತವಾಗಿದ್ದರೆ ಹೇಗೋ ಹಾಗೆ, ಅನ್ವಯಿಸತಕ್ಕದ್ದು.